# ಕರ್ನಾಟಕ ವಿಶ್ವವಿದ್ಯಾಲಯ
KARNATAK UNIVERSITY, DHARWAD

## ಆದಿಕವಿ ಪಂಪ ಅಧ್ಯಯನ ಪೀಠ

ನಂ: ಆಪಅಪೀ/2026–27/ ದಿನಾಂಕ : 03–11–2026

**Sub : Quotation for Kannada D.T.P. Work**

**ದರಪಟ್ಟಿಯನ್ನು ಸಲ್ಲಿಸುವ ಕುರಿತು.**

ವಿಷಯ : 'ಪಂಪ ಭಾರತ ವಾಚನ ಕೈಪಿಡಿ' ಗ್ರಂಥದ ಸಂಪುಟಗಳನ್ನು ಡಿ.ಟಿ.ಪಿ. ಮಾಡುವುದರ ಕುರಿತು.

ಮಾನ್ಯರೆ,

ಮೇಲಿನ ವಿಷಯದನ್ವಯ 'ಆದಿಕವಿ ಪಂಪ ಅಧ್ಯಯನ ಪೀಠ'ದಿಂದ ಪ್ರಕಟವಾಗುತ್ತಿರುವ 'ಪಂಪ ಭಾರತ ವಾಚನ ಕೈಪಿಡಿ' ಗ್ರಂಥದ ಸಂಪುಟಗಳನ್ನು ಡಿ.ಟಿ.ಪಿ. ಮಾಡಲು ಈ ಕೆಳಗಿನ ಅಂಶಗಳನ್ನು ಗಮನಿಸಿ ದರಪಟ್ಟಿಯನ್ನು ಸಲ್ಲಿಸಲು ಕೋರಲಾಗಿದೆ.

1) ಸಂಪುಟಗಳನ್ನು ಹಳಗನ್ನಡ ಮತ್ತು ಹೊಸಗನ್ನಡಗಳೆರಡರಲ್ಲೂ ನುಡಿ ತಂತ್ರಾಂಶದಲ್ಲಿ ಡಿ.ಟಿ.ಪಿ. ಮಾಡಬೇಕು.
2) ಒಂದು, ಎರಡು ಮತ್ತು ಮೂರು ಸಲ ಕರಡು ಪ್ರತಿಗಳನ್ನು ತಿದ್ದಲು ಕೊಡಬೇಕು.
3) ಡಿ.ಟಿ.ಪಿ. ಮಾಡಿದ ಸಂಭಾವನೆಗೆ ಜಿ.ಎಸ್.ಟಿ. ನಮೂದಿತ ಬಿಲ್ಲನ್ನು ನೀಡಬೇಕು.
4) ಪ್ರತಿ ಪುಟವು 1/8 ಡೆಮ್ಮಿ ಸೈಜಿನಲ್ಲಿ (10x17 ಸೆಂಟಿಮೀಟರ್) 12 ಪಾಯಿಂಟ್ ಅಟೋಲೀಡಿಂಗ್ ನುಡಿ (01k) ಅಕ್ಷರದಲ್ಲಿ ಪೇಜ್ ಮೇಕರದಲ್ಲಿ ಅಲಾಯನ್‌ಮೆಂಟ್ ಮಾಡಿ ಮಾಡಿಕೊಡಬೇಕು.
5) ಪೇಜಮೇಕರ್ ಫೈನಲ್ ಕಾಪಿಯೊಂದಿಗೆ ಪಿ.ಡಿ.ಎಫ್. ಸಾಫ್ಟ್ ಪ್ರತಿಯನ್ನು ನೀಡಬೇಕು ಜೊತೆಗೆ ಮುದ್ರಣ ಕಾರ್ಯ ಕೈಗೊಂಡಾಗ ಬದಲಾವಣೆಗಳು ಬಂದರೆ ಸರಿಪಡಿಸಿಕೊಡಬೇಕು.
6) ಸಂಯೋಜಕರು ತಿಳಿಸಿದ ದಿನದೊಳಗೆ ಸದರ ಕಾರ್ಯವನ್ನು ನಿರ್ವಹಿಸಬೇಕು ಜೊತೆಗೆ ಸಂಯೋಜಕರೊಂದಿಗೆ ಹೊಂದಾಣಿಕೆಯಿಂದ ನಿಗದಿತ ಸಮಯದೊಳಗೆ ಅಚ್ಚುಕಟ್ಟಾಗಿ ಕಾರ್ಯವನ್ನು ನಿರ್ವಹಿಸಬೇಕು. ಇಲ್ಲದಿದ್ದರೆ ತಮಗೆ ನೀಡಿದ ಆದೇಶವನ್ನು ಯಾವುದೇ ಕಾರಣ ನೀಡದೆ ರದ್ದುಗೊಳಿಸಲಾಗುವುದು.
7) ಸದರ ಕಾರ್ಯಕ್ಕೆ ಯಾವುದೇ ರೀತಿಯ ಮುಂಗಡ ಹಣವನ್ನು ನೀಡಲಾಗುವುದಿಲ್ಲ. ಪ್ರತಿ ಸಂಪುಟ ಪುಸ್ತಕದ ಮುದ್ರಣ ಕಾರ್ಯಕ್ಕೆ ಪಿ.ಡಿ.ಎಫ್. ಸಾಫ್ಟ್ ಪ್ರತಿಯನ್ನು ನೀಡಿದ ನಂತರದಲ್ಲಿ ಹಣ ಬಟವಡೆ ಮಾಡಲು ವಿಶ್ವವಿದ್ಯಾಲಯಕ್ಕೆ ತಿಳಿಸಲಾಗುವುದು.

ಈ ರೀತಿ ಮೇಲಿನ ನಿಯಮಗಳಿಗೆ ಬದ್ದವಾಗಿ ಡಿ.ಟಿ.ಪಿ. ಮಾಡಿ 1/8 ಡೆಮ್ಮಿ ಸೈಜಿನ ಪುಸ್ತಕದ ಅಲಾಯನ್‌ಮೆಂಟ್ ಮಾಡಿ ನೀಡಲು ಪ್ರತಿ ಪುಟದ ಬೆಲೆಯನ್ನು ತಿಳಿಸಬೇಕು. ದರಪಟ್ಟಿಯನ್ನು ಈ ಕೆಳಗಿನ ವಿಳಾಸಕ್ಕೆ ಮುಚ್ಚಿದ ಲಕೋಟಿಯಲ್ಲಿ **ದಿ: 11–11–2026 ರ ಸಾಯಂಕಾಲ 6.00 ಗಂಟೆ** ಒಳಗಾಗಿ ಸಲ್ಲಿಸಲು ಕೋರಲಾಗಿದೆ.

**ಇವರಿಗೆ,**

**ಕುಲಸಚಿವರು,**
**ಆದಿಕವಿ ಪಂಪ ಅಧ್ಯಯನ ಪೀಠ**
**ಜಾನಪದ ಅಧ್ಯಯನ ವಿಭಾಗ,**
**ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ**

ಸಂಯೋಜಕರು
ಆದಿಕವಿ ಪಂಪ ಅಧ್ಯಯನ ಪೀಠ
ಕ.ವಿ.ವಿ. ಧಾರವಾಡ